doc-425
T.P-2

(1)

R No KRNN 12 ಶ್ರೀ 31-12-1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily Mysore 4

– For Influential Publicity –

ಪ್ರಕಾಶಕರು ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬಯ್ಯ ಸಂಪಾದಕರು: ಧರ್ಮಸ್ಥ ಚಾರುವಿರಚಿತ ಎಂ. ಎಸ್. ಕೃಷ್ಣ 3 ಸ

ಜನತೆಗೆ ಇಂದಿರಾ ಕರೆ

ಮುಖ್ಯಮಂತ್ರಿಗಳಿಂದ ಆರಂಭ

ಹುಣಸೂರು ತಾಲ್ಲೂಕಿನ ತಟ್ಟೇಕೆರೆ ಗ್ರಾಮದಲ್ಲಿ ರೂ. 77500 ವೆಚ್ಚದ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಯನ್ನು ಮೊನ್ನೆ ಉದ್ಘಾಟಿಸಿದರು.

★

ಆಸ್ಪತ್ರೆ ಪ್ರಾರಂಭೋತ್ಸವ

ಹುಣಸೂರು ತಾಲೂಕು ಹರಿಕ್ಯಾತನಹಳ್ಳಿ ಗ್ರಾಮದಲ್ಲಿ ಮೊನ್ನೆ ಲೋಕಲ್ ಫಂಡ್ ಆಸ್ಪತ್ರೆಯನ್ನು ಉದ್ಘಾಟಿಸಿದರು.

★

ಇಂದಿರಾ ಆರೋಪ

ರೊಹಟಕ್‌ನಲ್ಲಿ ನಡೆದ ಭಾರಿ ಸಭೆಯಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿರವರು ಭಾಷಣ ಮಾಡುತ್ತಾ, ವಿರೋಧಿಗಳು ದೇಶದಲ್ಲಿ ಗಲಭೆ ಸೃಷ್ಟಿಸಲು, ಚಳಿವಳಿಗಳ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟದ ಜಂಟಿ ಪಿತೂರಿ ಕುರಿತು ಜನತೆ ಎಚ್ಚರಿಕೆಯಿಂದ ಇಂಬೇಕೆಂದು ತಿಳಿಸಿದರು.

●

ಹಕ್ಕು ತ್ಯಾಗ

ವಿದೇಶ ಮಂತ್ರಿ ಚವ್ಹಾಣ್‌ರೊಡನೆ ಪೋರ್ಚುಗಲ್ ವಿದೇಶಾಂಗ ಮಂತ್ರಿ ಈ ದಿನ ತನ್ನ ದೆಹಲಿಯಲ್ಲಿ ಒಪ್ಪಂದಕ್ಕೆ ಸಹಿ ಮಾಡುವುದರಿಂದ, ಪೋರ್ಚುಗಲ್ ಅದರ ಪ್ರಧಾನ ಸ್ವಾಧೀನಗಳಾದ ಗೋವ, ಡಿಯು, ದಾದ್ರ ಮತ್ತು ನಗರ ಹವೇಲಿ ಮೇಲಿನ ಹಕ್ಕನ್ನು ಔಪಚಾರಿಕವಾಗಿ ತ್ಯಜಿಸಿದೆ.

●

ಒಪ್ಪಂದಕ್ಕೆ ರುಜು

ರಷ್ಯದೊಡನೆ ಮುಂದಿನ ವರ್ಷ ವ್ಯಾಪಾರವನ್ನು ಎರಡರಷ್ಟು ಮಾಡುವ ಒಪ್ಪಂದಕ್ಕೆ ನವ ದೆಹಲಿಯಲ್ಲಿ ರುಜು ಮಾಡಲಾಯಿತು.

ಜನತಾ ಸರ್ಕಾರ, ಜನತಾ ಶಾಸನಸಭೆ

ರಾಜಮಹೇಂದ್ರಿ — ಅಖಿಲ ಭಾರತ ಸರ್ವ ಸೇವಾಸಂಘದ ಕಾರ್ಯದರ್ಶಿ ಶ್ರೀ ಥಾಕೂರ್ ದಾಸ್ ಬಂಗ್‌ರವರು, ಬೀಹಾರಿನಲ್ಲಿ ಜನತಾ ಸರ್ಕಾರ ಮತ್ತು ಜನತಾ ಶಾಸನ ಸಭೆ ಸ್ಥಾಪನೆಗೆ ಸಿದ್ಧತೆ ನಡೆಯುತ್ತಿದೆ ಎಂದು ಪತ್ರಿಕೆಯವರಿಗೆ ತಿಳಿಸಿದರು — ಅವರ ಜೊತೆಯಲ್ಲಿದ್ದ ಆಂಧ್ರದ ಮಾಜಿ ಮಂತ್ರಿ ಶ್ರೀ ತಿನ್ನಾರೆಡ್ಡಿಯವರು, ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ, ಅಲ್ಲಿಯವರಿಗೆ ಅವಶ್ಯಕವಾದಷ್ಟು ಭತ್ತ ಬಿಡದಿದ್ದರೆ, ಸರಕಾರ ಲೆವಿ ತೆಗೆದುಕೊಂಡು ಹೋಗಲು ಅವಕಾಶಕೊಡದಂತೆ ಕೃಷಿಕಾರ್ಮಿಕರು ಪ್ರತಿಭಟಿಸುವರು.

★

ಸತ್ತವರ ಸಂಖ್ಯೆ

5 ಸಾವಿರಕ್ಕೆ ಹೆಚ್ಚು ಮಂದಿ ಭೂಕಂಪದಲ್ಲಿ ಸತ್ತರೆಂದು ರಾವಲ್ಪಿಂಡಿ ವರದಿ ತಿಳಿಸುತ್ತದೆ.

★

ವಿದ್ಯಾರ್ಥಿಗಳ ಮೆರವಣಿಗೆ

ಜಯಪ್ರಕಾಶರ ಪರದ ಕಾಲೇಜು ವಿದ್ಯಾರ್ಥಿಗಳು 200 ಮಂದಿ ತರಗತಿಗಳಿಗೆ ಹೋಗದೆ ವಿದ್ಯಾನಗರ ಭಾಗದಿಂದ ಮೆರವಣಿಗೆ ನಡೆಸಿ, ಕಡೆಯಲ್ಲಿ ನೆಹರೂ ಅವರ ಣದಲ್ಲಿ ಭಾಷಣ ಮಾಡಿದರೆಂದು ಹುಬ್ಬಳ್ಳಿ ವಾರ್ತೆ ತಿಳಿಸುತ್ತದೆ.

●

ನಿಧಿ ಅರ್ಪಣೆ

ಜನವರಿ 4 ನೇ ತಾ. ನಡೆಯುವ ಕೆಪಿಸಿಸಿ ಸರ್ವ ಸದಸ್ಯರ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹೆಚ್ ಪಾಟೀಲ್‌ರಿಗೆ ರೂ 1 ಲಕ್ಷ ನಿಧಿ ಅರ್ಪಿಸಲು ಧಾರವಾಡ ಜಿಲ್ಲಾ ಕಾಂಗ್ರೆಸ್ ನಿರ್ಧರಿಸಿದೆ

● ದೇಶದಲ್ಲಿ ಹೊಸ ಕಾರುಗಳ ಮಾರಾಟ ನಿರ್ಬಂಧ ಹೋಗಲಿದೆ

ಆಸ್ತಿಯ ಲೆಕ್ಕದ ವಿವರಣೆ

ಸದ್ಯೆ ಕಾಂಗ್ರೆಸಿನ ಈಚಿನ ಸೂಚನೆ ಪ್ರಕಾರ ಕರ್ನಾಟಕದ 27 ಮಂತ್ರಿಗಳ ಪೈಕಿ ಕೇವಲ 7 ಮಂತ್ರಿಗಳು ಮಾತ್ರ ತಮ್ಮ ಆಸ್ತಿ ಮುರಿತು ಮುಖ್ಯ ಮಂತ್ರಿಗಳಲ್ಲಿ ವಿವರಣೆ ನೀಡಿರುವರು

ಕರ್ನಾಟಕ ರಾಜ್ಯದ 210 ಶಾಸಕರಲ್ಲಿ 42 ಮಂದಿ ಮಾತ್ರ ತಮ್ಮ ಆಸ್ತಿಯ ಘೋಷಣೆ ಮಾಡಿರುವರು.

★

ದಾಖಲಾತಿ ಮೈಕ್ರೋಫಿಲ್ಮ್

ಲಾಸ್‌ಏಂಜಲ್ಸ್‌ನಿಂದ ಬಂದಿರುವ ವರದಿ ಪ್ರಕಾರ ದಿ ಜನ್ಸೈನರ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನ 24 ಮಿಲಿಯ ಪ್ರತಿಗಳು ಮೈಕ್ರೋಫಿಲ್ಮ್‌ವಾದ ದಾಖಲಾತಿ ಇದೆ.

★

ವೀಣೆ ಬಾರಿಸಿ ಮಳೆ ತಂದರು

ಮೈಸೂರಿನ ವೈಣಿಕ ಪ್ರವೀಣ ಶ್ರೀ ಆರ್. ಎಸ್. ಕೇಶವ ಮೂರ್ತಿಯವರೆ ಮಗ ಖ್ಯಾತ ವೀಣೆ ವಿದ್ವಾಂಸ ಶ್ರೀ ಆರ್. ಕೆ. ಸೂರ್ಯನಾರಾಯಣರು ಕೈರೋದಲ್ಲಿ ಇತ್ತೀಚೆಗೆ ಸಭಿಕರ ಇಚ್ಛೆಯಂತೆ ಅಮೃತ ವರ್ಷಿಣಿ ರಾಗ ನುಡಿಸಿ ಭಾರಿ ಮಳೆ ಬರಿಸಿದುದಾಗಿ ಅವರು ಬೊಂಬಾಯಿನಲ್ಲಿ ತಿಳಿಸಿದರು.

★★

ಅತಿ ಬಡ ದೇಶಗಳಿಗೆ ಸಹಾಯ

ವಿಶ್ವದ ಅತಿ ಬಡ ದೇಶಗಳೆಂದು ಪಟ್ಟಿಯಲ್ಲಿರುವ ಮೂವತ್ತೆರಡು ಏಷ್ಯ ಆಫ್ರಿಕಾ ರಾಷ್ಟ್ರಗಳಿಗೆ ಪ್ರತಿ ವರ್ಷ ಮೂರು ಬಿಲಿಯ ಡಾಲರು ಒದಗಿಸಲು ಈ ಸರ್ಕಾರವ ಆಯೋಗ ಶಿಫಾರಸು ಮಾಡಿದೆಯೆಂದು ನ್ಯೂಯಾರ್ಕ್ ವಾರ್ತೆ ತಿಳಿಸುತ್ತದೆ.

★

★ ಭಾರತದಲ್ಲಿ 73–74 ರಲ್ಲಿ ಅಲೂಗಡ್ಡೆ ಉತ್ಪಾದನೆಯಲ್ಲಿ 45 25 ಲಕ್ಷ ಟನ್ ಗಳಿದ್ದುದು ಈಗ ಕಳೆದ ಸಾಲಿಗಿಂತ 1 75 ಲಕ್ಷ ಟನ್ ಹೆಚ್ಚಾಗಿದೆ.

Rugs, Sweaters & Kashmir Coats

ರಗ್ಗು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Price Shop in Actual Practice

ಶ್ರೀ ಎಂ. ವೆಂಕಟಕೃಷ್ಣಯ್ಯನವರ ದಿನಾಚರಣೆ

ಮೈಸೂರು– ವೃದ್ಧ ಪಿತಾಮಹ, ದಯಾಸಾಗರ ದಿ॥ ಶ್ರೀ ಎಂ. ವೆಂಕಟಕೃಷ್ಣಯ್ಯನವರ 41 ನೇ ದಿನಾಚರಣೆಯನ್ನು ಕಾ॥ 29 ಭಾನುವಾರ ಅನಾಥಾಲಯದ ಆವರಣದಲ್ಲಿ ನಡೆಸಲಾಯಿತು

ಭೂಕಂಪದ ಹಾವಳಿ

ರಾವಲ್ಪಿಂಡಿ— ಉತ್ತರ ಪಾಕಿಸ್ಥಾನದ ದೂರದ ಪರ್ವತ ಭಾಗದಲ್ಲಿ ಆದ ಭೂಕಂಪದಿಂದ ಹಲವು ನೂರು ಜನರು ಸತ್ತಿರುವರೆಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನಿ ಇಂದಿರಾರವರ ವಿರುದ್ಧ ಪ್ರದರ್ಶನ

ಬೊಂಬಾಯಿ— ಪ್ರಧಾನಿ ಇಂದಿರಾರವರ ಶನಿವಾರ ತುಂಬಾ ಪ್ರದರ್ಶನಗಳು ನಡೆದವು – ಮಧ್ಯೆ ಒಂದು ಕಡೆ ಅವರು ತೀವ್ರ ಕ್ರೋಧಗೊಂಡು, ಈ ಜನರೇ ರೈಲ್ವೇ ನುಷ್ಯರಗ್ಳಾ, ಉತ್ಪಾದನೆ ಕಡಮೆಗೊಳ್ಳಲೂ ಕಾರಣರೆಂದು ಹೇಳಿದರು – ಅವರು ಒಂದು ಸಮಾರಂಭದಿಂದ ಮತ್ತೊಂದಕ್ಕೆ ಹೋದಾಗ ಅಲ್ಲೂ ಕಪ್ಪುಬಾವುಟ ಪ್ರದರ್ಶನ ಮತ್ತು ಘೋಷಣೆ ಕೂಗಾಟ ನಡೆಯುತ್ತಿತ್ತು – ವಿಮಾನ ನಿಲ್ದಾಣದಿಂದ ನಗರಕ್ಕೆ ಪ್ರವೇಶಿಸಿದಾಗ 5000 ಮಹಿಳೆಯರು ಕಪ್ಪು ಬಾವುಟ ಪ್ರದರ್ಶನ ಕಪ್ಪು ಉಡಾಕಾಟುಟ್ಟು ಮಾಡಿದರು – ಓವರ್ ಹತ್ತಿರ ರಿಪಬ್ಲಿಕ್ ಪಾರ್ಟಿಯ 2000 ಕಾರ್ಯಕರ್ತರೂ ಯುವಕರೂ ನ್ಯಾಯಕ್ಕೆ ಕೇಳಿಕೆಹಾಕಿ ಕಪ್ಪು ಬಾವುಟ ಪ್ರದರ್ಶಿಸಿದರು – ರಾಜಭವನದಿಂದ ಶಿವಾಜಿ ಪಾರ್ಕಿನಲ್ಲಿ ಭಾಷಣಮಾಡಲು ಹೊರಟಾಗ ಭಾರಿ ಸಾಮೂಹಿಕ ಪ್ರದರ್ಶನ ಕಡೆಯಿತು.

ವುಡ್‌ಲಾಂಡ್ 27 12 74 ರಿಂದ

ಅವೋಫು 3 ನೇ ವಾರ

ಚ ಟ್ಟ ಕಾ ರಿ

ಪ್ರ ದ ರ

ಅಪೂರ್ವ ಈಸ್ಟ್‌ಮನ್ ಕಲರ್ ಮಲಯಾಳಂ ಕಲಾಕೃತಿ

ಪಾತ್ರ — ಲಕ್ಷ್ಮೀ ಮೋಹನ್ ದಿನ 6 ಪ್ರದರ್ಶನಗಳು

ಅ ಪೆ ರಾ 27 12 74 ರಿಂದ

ಅತ್ಯಯಾ ಮಾವುಯಾ

ಜೈ ಶಂಕರ್ ತಾಯ್ ನಾಗೇಶ್ ಮನೋರಮ

ಅಭಿನಯಿಸಿರುವ

ಅವೋಫೆ ತಮಿಳು ಚಿತ್ರ

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Help The Gorakshana

A HumanitarianPropoganda Monthly....

Protect the Cow

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ



Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Sa[illegible]di Press, Chamarajapuram Mysore